**ಸಿ.ಸಿ.ನಂ.852/2024**

**ಸಿಡಬ್ಲ್ಯೂಃ 03 ಪಿಡಬ್ಲ್ಯೂಃ 03**

**ಮೆಃ ಪ್ರಧಾನ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ**

**ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸಪ್ಪ ಚಲವಾದಿ. |
| ತಂದೆಯ ಹೆಸರು | : | ರಾಮಪ್ಪ ಚಲವಾದಿ. |
| ವಯಸ್ಸು | : | 57 ವರ್ಷ. |
| ಉದ್ಯೋಗ | : | ಕೂಲಿ ಕೆಲಸ. |
| ವಾಸಸ್ಥಳ | : | ಇವಣಗಿ. |

**ಸಾಕ್ಷಿಯನ್ನು ಇಂದು ದಿನಾಂಕಃ 16-05-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ಚಾಸಾ-2 ನನಗೆ ಪರಿಚಯವಿರುವುದಿಲ್ಲ. ಒಂದು ವರ್ಷದ ಹಿಂದೆ ಅಬಕಾರಿ ಅಧಿಕಾರಿಗಳು ಬಸವನ ಬಾಗೇವಾಡಿಯ ಬಸವೇಶ್ವರ ದೇವಸ್ಥಾನದ ಹತ್ತಿರ, ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಕಳ್ಳಭಟ್ಟಿ ಸಾರಾಯಿಯನ್ನು ಹಿಡಿದಿದ್ದೇವೆ ಅಂತಾ ಹೇಳಿ ನನ್ನಿಂದ ಸಹಿ ಪಡೆದಿರುತ್ತಾರೆ. ನಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಏನನ್ನೂ ಜಪ್ತಿಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಮಾಹಿತಿ ಇರುವುದಿಲ್ಲ.

2) ಸಾಕ್ಷಿಗೆ ನಿಪಿ-4 ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-6 ಮಾದರಿ ಶೀಲ್ ನಕಲನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮು.ಮಾ-1 ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ.

**ಸಿ.ಸಿ.ನಂ.852/2024**
**ಸಿಡಬ್ಲ್ಯೂ: 03 ಪಿಡಬ್ಲ್ಯೂ: 03**

(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಎ.ಪಿ.ಪಿ ರವರಿಂದ</u>

3) ದಿನಾಂಕ: 30-12-2023 ರಂದು ನಾನು ಮತ್ತು ಚಾಸಾ-2 ರವರು ಕೂಡಿಕೊಂಡು ಬಸವನ ಬಾಗೇವಾಡಿಯ ಅಂಬೇಡ್ಕರ್ ಸರ್ಕಲ್ ನಲ್ಲಿ ನಿಂತಿದ್ದೆ ಎಂದು ಸೂಚಿಸುವುದು ಸರಿಯಲ್ಲ. ಆಗ ಅಬಕಾರಿ ಅಧಿಕಾರಿಗಳು ಬಂದು ನನಗೆ ಮತ್ತು ಚಾಸಾ-2 ರವರಿಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿದರು ಎಂದು ಸೂಚಿಸುವುದು ಸರಿಯಲ್ಲ. ಆಗ ನಾವು ಪಂಚರಾಗಲು ಒಪ್ಪಿಕೊಂಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಅಲ್ಲಿಂದ ನಾನು ಮತ್ತು ಚಾಸಾ-2 ಹಾಗೂ ಅಬಕಾರಿ ಅಧಿಕಾರಿಗಳು ಸೇರಿ ಆರೋಪಿತಳ ಮನೆಯ ಹತ್ತಿರ ಹೋಗಿದ್ದೇವು ಎಂದು ಸೂಚಿಸುವುದು ಸರಿಯಲ್ಲ. ಆರೋಪಿತಳ ಮನೆಯನ್ನು ಅಬಕಾರಿ ಅಧಿಕಾರಿಗಳು ಸ್ಥಳಿಯರಿಗೆ ಕೇಳಿದರು, ಆಗ ಅವರು ಆರೋಪಿತಳ ಮನೆಯನ್ನು ತೋರಿಸಿದರು ಎಂದು ಸೂಚಿಸುವುದು ಸರಿಯಲ್ಲ. ಆಗ ಆರೋಪಿತಳು ಅಬಕಾರಿ ಅಧಿಕಾರಿಗಳು ಸಮವಸ್ತ್ರದಲ್ಲಿ ಇರುವುದನ್ನು ನೋಡಿ ಓಡಿಹೋದಳು ಎಂದು ಸೂಚಿಸುವುದು ಸರಿಯಲ್ಲ. ಅಬಕಾರಿ ಅಧಿಕಾರಿಗಳು ಆರೋಪಿತಳನ್ನು ಹಿಡಿಯಲು ಪ್ರಯತ್ನಿಸಿದರೂ ಸಹ, ಅವಳು ಸಿಗಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಂತರ ಆರೋಪಿತಳ ಮನೆಗೆ ಬಂದು ಶೋಧನಾ ಸಮೂಚಿತ ವರದಿಯನ್ನು ತಯಾರಿಸಿ ಆರೋಪಿತಳ ಮನೆಯನ್ನು ಪ್ರವೇಶ ಮಾಡಿದರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿತಳ ಮನೆಯನ್ನು ಪ್ರವೇಶ ಮಾಡಿದಾಗ, ಆರೋಪಿತಳ ಮನೆಯನ್ನು ತಪಾಸಣೆ ಮಾಡಿದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ಮನೆಯಲ್ಲಿ ಐದು ಲೀಟರ್ ಸಾಮರ್ಥ್ಯವುಳ್ಳ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಇತ್ತು ಎಂದರೆ ಸರಿಯಲ್ಲ. ಸದರಿ ಕ್ಯಾನಿನಲ್ಲಿ ನಾಲ್ಕು ಲೀಟರ್ ಸಾಮರ್ಥ್ಯದ ಕಳ್ಳಭಟ್ಟಿ ಸಾರಾಯಿ ಇತ್ತು ಎಂದು ಸೂಚಿಸುವುದು ಸರಿಯಲ್ಲ. ಸದರಿ ಮನೆಯ ಇನ್ನೊಂದು ಕೋಣೆಯಲ್ಲಿ

**ಸಿ.ಸಿ.ನಂ.852/2024**
**ಸಿಡಬ್ಲ್ಯೂ: 03 ಪಿಡಬ್ಲ್ಯೂ: 03**

ಆರೋಪಿತಳ ಆಧಾರ್ ಕಾರ್ಡ್ ನ ಝೆರಾಕ್ಸ್ ಪ್ರತಿ ಇತ್ತು ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಸಮಕ್ಷಮ ಅಬಕಾರಿ ಅಧಿಕಾರಿಗಳು ರಾಸಾಯನಿಕ ಪರೀಕ್ಷೆಗಾಗಿ 180 ಎಮ್.ಎಲ್.ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಶ್ಯಾಂಪಲ್ ಗಾಗಿ ತೆಗೆದರು ಎಂದು ಸೂಚಿಸುವುದು ಸರಿಯಲ್ಲ. ಘಟನಾ ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಿಗ್ಗೆ 9-00 ರಿಂದ 10-00 ಗಂಟವರೆಗೆ ಪಂಚನಾಮೆಯನ್ನು ಮಾಡಿದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ನಿಪಿ-4 ಪಂಚನಾಮೆಯಲ್ಲಿರುವ ವಿಷಯವನ್ನು ಓದಿಕೊಂಡು ತಿಳಿದು ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಪಾಟೀ ಸವಾಲು: ಆರೋಪಿತಳ ಪರ ಶ್ರೀ.**SPL** ವಕೀಲರಿಂದ

ಪಾಟೀ ಸವಾಲು: ಇರುವುದಿಲ್ಲ

ಮರುವಿಚಾರಣೆ: ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಪ್ರಧಾನ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.